REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 38 । 24 ಡಿಸೆಂಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-

## ಬ್ಯಾಂಕ್‌ಟೆಕ್-ಎಕ್ಸ್ ಸಮ್ಮಿತ್-2025 ಸಮಾರಂಭದಲ್ಲಿ

# BEST URBAN CO-OPERATIVE BANK

## ರಾಷ್ಟ್ರೀಯ ಪ್ರಶಸ್ತಿ ಗಳಿಸಿದ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳು

**ಬೆಂಗಳೂರು:** ದಿನಾಂಕ : 05.12.2025ರಂದು ಬೆಂಗಳೂರಿನ ಕ್ಯಾಪಿಟಲ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಹಾಗೂ ಭಾರತ ನೆಟ್‌ವರ್ಕ್ ಗ್ರೂಫ್ ಸಹಯೋಗದಲ್ಲಿ ನಡೆದ ಬ್ಯಾಂಕ್ ಟೆಕ್-ಎಕ್ಸ್ ಸಮ್ಮಿತ್-2025 ಸಮಾರಂಭವನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರವರು ಉದ್ಘಾಟಿಸಿದರು.

ಭಾರತ್ ನೆಟ್‌ವರ್ಕ್ ಗ್ರೂಫ್‌ನ ಮುಖ್ಯಸ್ಥರಾದ ಶ್ರೀ ಅನುಪಮ್ ಗುಪ್ತಾ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಪುಂಡಲೀಕ ಎನ್. ಕೇರೂರೆ ಉಪಸ್ಥಿತರಿದ್ದರು.

### ಎಲ್‌ಐಸಿ ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್, ಉಡುಪಿ




**ಉಡುಪಿ:** ನಗರದ ಎಲ್‌ಐಸಿ ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್ ಈ ಬ್ಯಾಂಕಿಗೆ Best Digital Payments Initiative ಪ್ರಶಸ್ತಿಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೃಷ್ಣ ಕೆ. ರವರು ಮತ್ತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಶಶಿಕಲಾ ರವರಿಗೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಕೆ.ಶಿವಪ್ರಸಾದ, ಶ್ರೀ ವಸಂತಕುಮಾರ ಪಿ. ರವರು ಉಪಸ್ಥಿತರಿದ್ದರು.




ಎಲ್‌ಐಸಿ ಎಂಪ್ಲಾಯೀಸ್ ಕೋ-ಆಪರೇಟಿವ್ ಬ್ಯಾಂಕ್, ಉಡುಪಿ ಇದರ ಅಧ್ಯಕ್ಷರಾದ ಶ್ರೀ ಕೃಷ್ಣ ಕೆ.ರವರಿಗೆ Best Chairperson of the Year ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ಬಸವೇಶ್ವರ ಸಹಕಾರ ಬ್ಯಾಂಕ್, ಜಮಖಂಡಿ




ಬಸವೇಶ್ವರ ಸಹಕಾರ ಬ್ಯಾಂಕ ನಿಯಮಿತ ಜಮಖಂಡಿ ಬ್ಯಾಂಕಿಗೆ Best Urban Co-Operative bank ಮತ್ತು Best NPA Management Bank ಎಂದು ರಾಷ್ಟ್ರೀಯ ಪ್ರಶಸ್ತಿಗಳನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಶಿವಾನಂದ ಯಾದವಾಡ ಇವರಿಗೆ ನೀಡಿ ಗೌರವಿಸಲಾಯಿತು.




ಮಾನ್ವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕಿಗೆ Best Cyber Security Initiative ಪ್ರಶಸ್ತಿಯನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾಗರಾಜ ಎಂ.ರವರಿಗೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ, ನಿರ್ದೇಶಕರುಗಳಾದ ಶ್ರೀ ಡಿ. ರಾಮಚಂದ್ರ ಶೆಟ್ಟಿ ಹಾಗೂ ಶ್ರೀ ಆರ್. ವೈದ್ಯನಾಥ ಶೆಟ್ಟಿ ಉಪಸ್ಥಿತರಿದ್ದರು.

ಭಾರತದ ಜಿಡಿಪಿ ಶೇ.7ಕ್ಕೆ ಏರುವ ನಿರೀಕ್ಷೆ 2
ಡಿಜಿಟಲ್ ಕ್ರೆಡಿಟ್ ಕ್ರಾಂತಿ : ಫ್ಲೆಕ್ಸ್ ಬೈ ಗೂಗಲ್ ಪೇ ಆವಿಷ್ಕಾರದ ಉದ್ದೇಶವೇನು? 4
ನೇರ ತೆರಿಗೆ ಸಂಗ್ರಹ ಹೆಚ್ಚಳ : ರೂ.17.04 ಲಕ್ಷ ಕೋಟಿ ವರಮಾನ ಸಂಗ್ರಹ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



# ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕ್ರೀಡಾ ಚಟುವಟಿಕೆಗಳು ಮೊಳಕೆ ಒಡೆಯಲಿ

ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದ–ದೇಶದ ಹೆಣ್ಣು ಮಕ್ಕಳು ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಗೈದು ನಾಡಿಗೆ ಹೆಮ್ಮೆ ತಂದಿದ್ದಾರೆ. ಏಕದಿನ ವಿಶ್ವಕಪ್ ಮಹಿಳಾ ಕ್ರಿಕೆಟ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಜಯಗಳಿಸಿದರೆ, ರೀತು ನೇಗಿ ನಾಯಕತ್ವದಲ್ಲಿ ಮಹಿಳಾ ಕಬಡ್ಡಿ ವಿಶ್ವಕಪ್‌ನಲ್ಲಿ ಸತತವಾಗಿ ಎರಡನೇ ವರ್ಷವೂ ಜಯಗಳಿದೆ. ಈ ತಂಡದ ಕೋಚ್ ಆಗಿದ್ದವರು ದಕ್ಷಿಣ ಕನ್ನಡದ ತೇಜಸ್ವಿನಿ ಬಾಯಿ. ವಿಶ್ವಕಪ್ ಬಾಕ್ಸಿಂಗ್ ಮಹಿಳಾ ವಿಭಾಗದಲ್ಲಿ ದೇಶದ ಏಳು ಬಾಕ್ಸರ್‌ಗಳು ಚಿನ್ನದ ಪದಕ ಬಾಚಿಕೊಂಡಿದ್ದಾರೆ.

ನಮ್ಮ ದೇಶದ ಹರ್ಮನ್ ಪ್ರೀತ್ ಕೌರ್ ನೇತೃತ್ವದ ಮಹಿಳಾ ಏಕದಿನ ಕ್ರಿಕೆಟ್ ತಂಡ ಜಯಗಳಿಸಿದ್ದರೆ, ಅಂಧ ಮಹಿಳಾ ಕ್ರಿಕೆಟ್ ತಂಡ ತುಮಕೂರಿನ ದೀಪಿಕಾ ಟಿ.ಸಿ. ಅವರ ನೇತೃತ್ವದಲ್ಲಿ ರಿಪ್ಪನ್ ಪೇಟೆಯ ವಿ. ಕಾವ್ಯ ಅವರ ಅದ್ಭುತ ಆಟದಿಂದ ಚೊಚ್ಚಲ ಟಿ–20 ವಿಶ್ವಕಪ್ ಜಯಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇಶಾ ಶರ್ಮಾ ಅವರು ಚೆಸ್‌ನಲ್ಲಿ ಗ್ರಾಂಡ್ ಮಾಸ್ಟರ್ ಆಗಿ ಹೊರಹೊಮ್ಮಿದ್ದರೆ, ಕನ್ನಡತಿ ಪ್ರಣತಿ ಅರಸ್ ಅವರು ಗಾಲ್‌ನಲ್ಲಿ ಮಾಡಿದ್ದಾರೆ. ಇವರ ಎಲ್ಲಾ ಮಹಿಳೆಯರ ಸಾಧನೆಯ ಹಿಂದೆಯೂ ಗೆಲ್ಲಬೇಕೆಂಬ ಛಲ, ಹೋರಾಟದ ಕೆಚ್ಚು ಇವರುಗಳನ್ನು ಜಯಶಾಲಿಯನ್ನಾಗಿಸಿವೆ.

ಈ ಎಲ್ಲಾ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸಲು ಕಾರಣ, ಇತ್ತೀಚೆಗೆ ಹಿರಿಯ ಸಹಕಾರಿ ಧುರಿಣ, ರಾಜಕೀಯ ಮುತ್ಸದಿಯಾಗಿದ್ದ ದಿವಂಗತ ಕೆ.ಎಚ್. ಪಾಟೀಲ ಅವರ ಹೆಸರಿನಲ್ಲಿರುವ ಕ್ರೀಡಾಂಗಣದಲ್ಲಿ ರಾಜ್ಯದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳ ರಾಜ್ಯಮಟ್ಟದ ಟೆನಿಕ್ವಾಯ್ಟ್ ಪಂದ್ಯಾಟ ನಡೆಯಿತು. ಇದು ನಮ್ಮ ಜಿಲ್ಲೆ ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಸರಾಗಿರುವಂತೆ ಕ್ರೀಡಾ ಕ್ಷೇತ್ರಕ್ಕೂ ಹೆಸರಾಗುತ್ತಿರುವುದನ್ನು ತೋರುತ್ತಿದೆ.

ಮುಂದಿನ ದಿನಗಳಲ್ಲಿ ಇಲ್ಲಿನ ಫುಟ್‌ಬಾಲ್ ಟರ್ಫ್ ಸ್ಟೇಡಿಯಂನಲ್ಲಿ ರಾತ್ರಿ ಪಂದ್ಯಾವಳಿ ನಡೆಸಲು ಅನುವಾಗುವಂತೆ ಫ್ಲಡ್‌ಲೈಟ್ ವ್ಯವಸ್ಥೆ ಕಲ್ಪಿಸಲು ಪ್ರಯತ್ನಗಳು ನಡೆದಿವೆ. ರಾಜ್ಯ ಸರ್ಕಾರದಿಂದಲೂ ಕ್ರೀಡಾಪಟುಗಳಿಗೆ ಅನುಕೂಲವಾಗುವ ರೀತಿಯಲ್ಲಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ರಾಷ್ಟ್ರೀಯ ಮಟ್ಟದ ಹಾಕಿ ಪಂದ್ಯಾಟಗಳನ್ನು ಆಡಿಸಬಹುದಾದಂತಹ ಮಹಾತ್ಮಗಾಂಧಿ ಹಾಕಿ ಟರ್ಫ್ ಇದೆ, ಕ್ರಿಕೆಟ್ ಮೈದಾನವಿದೆ. ನೀರಿನಲ್ಲಿ ಸಾಧನೆ ಮಾಡಲು ನಾಲ್ಕು ಈಜುಕೊಳಗಳಿವೆ. ಈಗಾಗಲೇ ನಮ್ಮ ರಾಜ್ಯದ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪದಕ ಗಳಿಸಿದರೆ, ರೂ. 5 ಕೋಟಿ ನಗದು ಪ್ರೋತ್ಸಾಹ ನೀಡಲಾಗುವುದು. ಇತರೆ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕ ಗಳಿಸಿದವರಿಗೆ ರೂ. 7 ಲಕ್ಷ, ಬೆಳ್ಳಿ ಪದಕಕ್ಕೆ ರೂ. 5 ಲಕ್ಷ ಹಾಗೂ ಕಂಚು ಪದಕ ಪಡೆದವರಿಗೆ ರೂ. 3 ಲಕ್ಷ ನಗದು ನೀಡಲಾಗುವುದು ಎಂದು ನಮ್ಮ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ.

ಇದರ ಸ್ಫೂರ್ತಿ ಪಡೆದು ನಮ್ಮ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕ್ರೀಡಾ ಚಟುವಟಿಕೆಗಳು ಮೊಳಕೆ ಒಡೆಯಲಿ. ರಾಷ್ಟ್ರೀಯ–ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ನಮ್ಮ ಯುವ ಪ್ರತಿಭೆಗಳು ಭಾಗವಹಿಸಿ ಪದಕಗಳನ್ನು ಸೂರೆಹೊಡೆಯಲಿ, ರಾಜ್ಯಕ್ಕೆ ಕೀರ್ತಿ ತರಲಿ ಎಂದು ಆಶಿಸುತ್ತೇನೆ.

▸▸ ಎಚ್.ಕೆ. ಪಾಟೀಲ

# ಭಾರತದ ಜಿಡಿಪಿ ಶೇ.7ಕ್ಕೆ ಏರುವ ನಿರೀಕ್ಷೆ

**ಹೊಸದಿಲ್ಲಿ :** ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಜಿಡಿಪಿ ಶೇ.7ರಷ್ಟು ಬೆಳವಣಿಗೆಯನ್ನು ದಾಖಲಿಸುವ ನಿರೀಕ್ಷೆಯಿದೆ. ಇದು ಅಕ್ಟೋಬರ್‌ನಲ್ಲಿ ಐಎಂಎಫ್ ಅಂದಾಜು ಮಾಡಿದ ಶೇ.6.6ಕ್ಕಿಂತ ಕೊಂಚ ಏರಿಕೆಯಾಗಲಿದೆ ಎಂದು ವಾಷಿಂಗ್ಟನ್ ಮೂಲದ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮಾಜಿ ಮುಖ್ಯ ಅರ್ಥಶಾಸ್ತ್ರಜ್ಞೆ ಗೀತಾ ಗೋಪಿನಾಥ್ ಹೇಳಿದ್ದಾರೆ.

ಪ್ರಸ್ತುತ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿರುವ ಗೀತಾ, "ಭಾರತ ಮುಂದಿನ 20 ವರ್ಷಗಳ ಕಾಲ ವಾರ್ಷಿಕ ಶೇ.8ರಷ್ಟು ಜಿಡಿಪಿ ಬೆಳವಣಿಗೆ ದಾಖಲಿಸಿದರೆ 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿಗೆ ಹತ್ತಿರವಾಗುತ್ತದೆ. ಆದರೆ ನಿರಂತರವಾಗಿ ಆರ್ಥಿಕ ಬೆಳವಣಿಗೆ ದರವನ್ನು ಶೇ.8ರ ಮಟ್ಟದಲ್ಲಿ ಕಾಯ್ದುಕೊಳ್ಳುವುದು ಸುಲಭದ ಕೆಲಸವಲ್ಲ. ಇದಕ್ಕೆ ನಿರಂತರ ಸುಧಾರಣೆಗಳ ಅಗತ್ಯವಿದೆ," ಎಂದು ಪ್ರತಿಪಾದಿಸಿದ್ದಾರೆ.




ಭಾರತ ಮತ್ತು ಅಮೆರಿಕದ ವ್ಯಾಪಾರ ಒಪ್ಪಂದ ಬಗ್ಗೆ ಮಾತನಾಡಿದ ಅವರು, "ಭಾರತಕ್ಕೆ ಅಮೆರಿಕ ಪ್ರಮುಖ ಪಾಲುದಾರದೇಶವಾಗಿದೆ. ಉಭಯ ದೇಶಗಳ ನಡುವೆ ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ನಡೆಯುತ್ತಿದೆ. ಎರಡೂ ಕಡೆ ಒಪ್ಪುವ ರೀತಿಯಲ್ಲಿ ಒಪ್ಪಂದಗಳ ಸ್ವರೂಪವಿರಬೇಕು," ಎಂದಿದ್ದಾರೆ.

"ಕಚ್ಚಾ ತೈಲ ದರ ಇಳಿಯುತ್ತಿದೆ. ಇಂಧನವನ್ನು ಆಮದು ಮಾಡಿಕೊಳ್ಳಲು ಭಾರತ, ರಷ್ಯಾವನ್ನಷ್ಟೇ ಅಲ್ಲದೆ ಇತರ ರಾಷ್ಟ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಅಮೆರಿಕದೊಂದಿಗೆ ವ್ಯಾಪಾರದ ನಂಟನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಗುತ್ತದೆ," ಎಂದಿದ್ದಾರೆ.

# ಮೈಸೂರಿನ ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಕನಕದಾಸ ಜಯಂತಿ ಮತ್ತು ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು



**ಮೈಸೂರು :** ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್, ಮೈಸೂರು ಇದರ ಕೇಂದ್ರ ಕಛೇರಿಯಲ್ಲಿ ಕನಕದಾಸ ಜಯಂತಿ ಮತ್ತು ವಾಲ್ಮೀಕಿ ಜಯಂತಿಯನ್ನು ಭಕ್ತಿ ಭಾವಪೂರ್ಣವಾಗಿ ಆಚರಿಸಲಾಯಿತು, ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಂ.ಬಿ. ಮಂಜೇಗೌಡ ಅವರು ದೀಪ ಬೆಳಗುವ ಮೂಲಕ ಉದ್ಘಾಟಿಸಿ ನಂತರ ಮಾತನಾಡಿದ ಅವರು, ಶ್ರೀ ಕನಕದಾಸರು ಮತ್ತು ವಾಲ್ಮೀಕಿ ಮಹರ್ಷಿಗಳ ಸಂದೇಶಗಳು ಸಮಾಜಕ್ಕೆ ನೈತಿಕ ಮೌಲ್ಯ, ಸಮಾನತೆ ಹಾಗೂ ಮಾನವೀಯತೆ ಪಥವನ್ನು ತೋರಿಸುತ್ತವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಡಾ.ಆನಂದ ಎಸ್., ರವರು ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಯೋಗಾನಂದ ಎಂ.ಬಿ., ಶ್ರೀ ಮುತ್ತುಕುಮಾರ್ ಎಸ್., ಶ್ರೀ ಚಂದ್ರಶೇಖರ ಆರ್., ಶ್ರೀ ಯತಿರಾಜು ಎಂ., ಶ್ರೀ ರಾಮನಾದನ್ ಸಿ., ಶ್ರೀ ಉತ್ತೇಜ್ ಎಸ್., ಶ್ರೀಮತಿ ಶ್ವೇತಾ ಎಸ್., ಶ್ರೀಮತಿ ನಿರ್ಮಲ ಸಿ., ಶ್ರೀ ಚಂದ್ರಶೇಖರ್ ಪಿ., ಶ್ರೀ ನಂದಕುಮಾರ್ ಎನ್.ಎಸ್. ರವರುಗಳು ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ನಾರಾಯಣ ಎಸ್.ಜೆ., ಜನರಲ್ ಮ್ಯಾನೇಜರ್ ರವರಾದ ಶ್ರೀ ಲಕ್ಷ್ಮೀಪ್ರಸಾದ್ ಎಂ.ಸಿ. ಮತ್ತು ಶ್ರೀ ಸತ್ಯನಾರಾಯಣ ಹೆಚ್.ಸಿ., ಸದಸ್ಯರು, ಠೇವಣಿದಾರರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರಕ್ಷೇತ್ರ, ಬ್ಯಾಂಕಿಂಗ್‌ಕ್ಷೇತ್ರ ಹಾಗೂ ಇತರೇಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್‌ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ.

ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ-ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

## ಹೊಸಕೋಟೆಯ ದಿ ಟೌನ್ ಕೋ-ಆಪರೇಟಿವ್ ಬ್ಯಾಂಕಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಆಯ್ಕೆ



ಎಸ್. ಮಂಜುನಾಥ್
ಅಧ್ಯಕ್ಷರು

**ಹೊಸಕೋಟೆ** : ದಿನಾಂಕ : 17.12.2025ರಂದು ದಿ ಟೌನ್ ಕೋ-ಆಪರೇಟಿವ್ ಬ್ಯಾಂಕಿನ ರಿಟರ್ನಿಂಗ್ ಅಧಿಕಾರಿಗಳು ಜರುಗಿಸಿದ ಪದಾಧಿಕಾರಿಗಳ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಶ್ರೀ ಎಸ್. ಮಂಜುನಾಥ್ ಮತ್ತು ಉಪಾಧ್ಯಕ್ಷರಾಗಿ ಶ್ರೀ ಅಕ್ಬರ್ ಪಾಷ್‌ರವರು ಆಯ್ಕೆಯಾಗಿರುತ್ತಾರೆ.



ಅಕ್ಬರ್ ಪಾಷ
ಉಪಾಧ್ಯಕ್ಷರು

# ಡಿಜಿಟಲ್ ಕ್ರೆಡಿಟ್ ಕ್ರಾಂತಿ : ಫ್ಲೆಕ್ಸ್ ಬೈ ಗೂಗಲ್ ಪೇ ಆವಿಷ್ಕಾರದ ಉದ್ದೇಶವೇನು?

ಭಾರತೀಯರಿಗಾಗಿ ಸಂಪೂರ್ಣ ಡಿಜಿಟಲ್ ಕ್ರೆಡಿಟ್ ಸೇವೆ ಒದಗಿಸುವ 'ಫ್ಲೆಕ್ಸ್ ಬೈ ಗೂಗಲ್ ಪೇ' ಎಂಬ ಹೊಸ ವಿಧಾನವನ್ನು ಗೂಗಲ್ ಬಿಡುಗಡೆ ಮಾಡಿದೆ. ಇದು ಗೂಗಲ್ ಪೇ ಫ್ಲೆಕ್ಸ್ ಆಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನೊಂದಿಗೆ ಪ್ರಾರಂಭವಾಗಿದೆ. ಈ ಹೊಸ ಡಿಜಿಟಲ್ ಸೇವೆ ಗೂಗಲ್ ಪೇ ಅಪ್ಲಿಕೇಶನ್ ಜೊತೆಗೆ ಸಂಯೋಜನೆ ಮಾಡಿದೆ.

ದೈನಂದಿನ ಹಣಕಾಸು ವ್ಯವಹಾರಗಳನ್ನು ಸುಲಭಗೊಳಿಸಲು ಗೂಗಲ್ ಮಹತ್ವದ ಹೆಜ್ಜೆ ಇಟ್ಟಿದೆ. ಗೂಗಲ್ ಪೇ ಮೂಲಕ 'ಫ್ಲೆಕ್ಸ್ ಬೈ ಗೂಗಲ್ ಪೇ' ಎಂಬ ಹೊಸ ಡಿಜಿಟಲ್ ಕ್ರೆಡಿಟ್ ಕಾರ್ಡ್ ಅನ್ನು ಪರಿಚಯಿಸಿದೆ. ರೂಪೇ ನೆಟ್‌ವರ್ಕ್ ಆಧಾರಿತ ಈ ಕಾರ್ಡ್ ಸಂಪೂರ್ಣವಾಗಿ ಗೂಗಲ್ ಪೇ ಅಪ್ಲಿಕೇಶನ್ ಜೊತೆ ಸಂಯೋಜಿತವಾಗಿದ್ದು, ಬಳಕೆದಾರರಿಗೆ ಕ್ರೆಡಿಟ್ ಮತ್ತು ಯುಪಿಐ ನಡುವಿನ ಅಂತರವನ್ನು ಕಡಿಮೆ ಮಾಡುವ ಗುರಿ ಹೊಂದಿದೆ.

ಸದ್ಯ, 'ಫ್ಲೆಕ್ಸ್ ಬೈ ಗೂಗಲ್ ಪೇ' ಬ್ರಾಂಡ್ ಅಡಿಯಲ್ಲಿ ಬಿಡುಗಡೆಯಾದ ಮೊದಲ ಉತ್ಪನ್ನ 'ಗೂಗಲ್ ಪೇ ಫ್ಲೆಕ್ಸ್ ಆಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್'. ಆಕ್ಸಿಸ್ ಬ್ಯಾಂಕ್‌ನ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಈ ಕಾರ್ಡ್ ಪಡೆಯಲು ಗೂಗಲ್ ಪೇ ಅಪ್ಲಿಕೇಶನ್ ಮೂಲಕವೇ ಅರ್ಜಿ ಸಲ್ಲಿಸಬಹುದು. ಇದು ಆರಂಭಿಕ ಹಂತವಾಗಿದ್ದು, ಮುಂಬರುವ ದಿನಗಳಲ್ಲಿ, ಐಡಿಎಫ್‌ಸಿ ಫಸ್ಟ್ ಬ್ಯಾಂಕ್, ಎಲ್ ಅಂಡ್ ಟಿ ಫೈನಾನ್ಸ್, ಪೇಯು ಫೈನಾನ್ಸ್, ಎಸ್‌ಎಂಎಫ್‌ಜಿ ಇಂಡಿಯಾ ಕ್ರೆಡಿಟ್ ಮೂಲಕವೂ ಆರಂಭಿಸುವ ಯೋಜನೆ ಹೊಂದಿರುವುದಾಗಿ ಗೂಗಲ್ ತಿಳಿಸಿದೆ.

ಯಾವುದೇ ಭೌತಿಕ ದಾಖಲೆಗಳು, ಕಾಗದ ಪತ್ರಗಳು ಅಥವಾ ಶಾಖೆಗೆ ಭೇಟಿ ನೀಡುವ ಅಗತ್ಯವಿಲ್ಲ. ಕೆಲವೇ ನಿಮಿಷಗಳಲ್ಲಿ ಅರ್ಜಿ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಮತ್ತು ಅನುಮೋದನೆ ದೊರೆತ ತಕ್ಷಣ ಕಾರ್ಡ್ ಅನ್ನು ಬಳಕೆ ಮಾಡಬಹುದು. ಭಾರತದಲ್ಲಿ ಕೇವಲ 5 ಕೋಟಿ ಕ್ರೆಡಿಟ್ ಕಾರ್ಡ್ ಬಳಕೆದಾರರಿದ್ದು, ಅದರ ವ್ಯಾಪ್ತಿಯನ್ನು ಹೆಚ್ಚಿಸುವ ಉದ್ದೇಶದಿಂದಾಗಿ ಗೂಗಲ್ ಈ ಹೊಸ ಆವಿಷ್ಕಾರವನ್ನು ತರಲು ಮುಂದಾಗಿರುವುದಾಗಿ ಹೇಳಿಕೊಂಡಿದೆ. ಡಿಜಿಟಲ್ ಹಾಗೂ ಸುಲಭವಾಗಿ ಹೆಚ್ಚಿನ ಜನರಿಗೆ ಕ್ರೆಡಿಟ್ ಕಾರ್ಡ್ ಅನ್ನು ಒದಗಿಸುವುದು ಇದರ ಪ್ರಮುಖ ಗುರಿಯಾಗಿದೆ.




ಫ್ಲೆಕ್ಸ್ ಬೈ ಗೂಗಲ್ ಪೇ ಕಾರ್ಡ್ ಅನ್ನು ಆನ್‌ಲೈನ್ ಹಾಗೂ ಆಫ್‌ಲೈನ್ ಎರಡೂ ಕಡೆ ಸುಲಭವಾಗಿ ಬಳಸಬಹುದು. ಹಾಗಾಗಿ ಕ್ರೆಡಿಟ್ ಕಾರ್ಡ್ ಅನ್ನು ಮೊದಲ ಬಾರಿಗೆ ಬಳಕೆ ಮಾಡುವವರಿಗೂ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದು ಗೂಗಲ್ ತಿಳಿಸಿದೆ.

ಫ್ಲೆಕ್ಸ್ ಬೈ ಗೂಗಲ್ ಪೇ ಕಾರ್ಡ್ ಸಂಪೂರ್ಣ ನಿಯಂತ್ರಣ ಗೂಗಲ್ ಪೇ ಅಪ್ಲಿಕೇಶನ್‌ನಲ್ಲೇ ಇದೆ. ವ್ಯವಹಾರದ ಮಿತಿಗಳನ್ನು ಹೊಂದಿಸುವುದು, ಕಾರ್ಡ್ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸುವುದು ಅಥವಾ ಸಕ್ರೀಯಗೊಳಿಸುವುದು ಪಿನ್ ಮರುಹೊಂದಿಸುವುದು ಸೇರಿದಂತೆ ಎಲ್ಲವೂ ಅಪ್ಲಿಕೇಶನ್‌ನಲ್ಲಿಯೇ ಇದೆ. ಈಗಾಗಲೇ ಬಿಡುಗಡೆಯಾಗಿರುವ ಈ ಸೇವೆ, ಮುಂದಿನ ಜನವರಿ 2026ರಿಂದ ಇನ್ನಷ್ಟು ಬಳಕೆದಾರರಿಗೆ ಲಭ್ಯವಾಗಲಿದೆ ಎಂದು ಗೂಗಲ್ ತಿಳಿಸಿದೆ. ಈ ನಿಟ್ಟಿನಲ್ಲಿ ಯುಪಿಐಗೆ ಹೊಂದಿಕೊಂಡಿರುವ ಭಾರತೀಯ ಬಳಕೆದಾರರಿಗೆ ಕ್ರೆಡಿಟ್ ಕಾರ್ಡ್ ಅನುಭವವನ್ನು ಸರಳವಾಗಿ ತಲುಪಿಸುವ ಪ್ರಯತ್ನವೇ ಫ್ಲೆಕ್ಸ್ ಬೈ ಗೂಗಲ್ ಪೇ ಆಗಿದೆ.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

ತುಮಕೂರು ವೀರಶೈವ ಸಹಕಾರ ಬ್ಯಾಂಕ್ ಲಿ., ತುಮಕೂರು ಇದರ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಜೆ. ರುದ್ರಪ್ಪರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರುಗಳಾದ ಶ್ರೀ ಟಿ.ಜೆ. ಗಿರೀಶ್, ಶ್ರೀ ಷಣ್ಮುಖಸ್ವಾಮಿ ಟಿ.ಎಸ್., ಶ್ರೀ ಆರ್. ಮಂಜುನಾಥರವರುಗಳು ಉಪಸ್ಥಿತರಿದ್ದರು.



# ವೈಯಕ್ತಿಕ ಸಾಲ, ಕಂತಿನ ಮೇಲೆ ಪರಿಣಾಮ ಬೀರಬಲ್ಲ 5 ಅಂಶಗಳು ಸಾಲ ಪಡೆಯೋದಕ್ಕೂ ಮುನ್ನ ತಿಳಿದುಕೊಳ್ಳುವ ಅಗತ್ಯವಿದೆ

ವೈಯಕ್ತಿಕ ಸಾಲ, ಕಷ್ಟದ ಸಂದರ್ಭದಲ್ಲಿ, ತುರ್ತು ಪರಿಸ್ಥಿತಿಯಲ್ಲಿ ಜನರ ಮೊದಲ ಆಯ್ಕೆಯಾಗಿದ್ದು, ಹಣಕಾಸು ಮುಗ್ಗಟ್ಟನ್ನು ತಪ್ಪಿಸಬಹುದಾಗಿದೆ. ಮೆಡಿಕಲ್ ವೆಚ್ಚ, ಟ್ರಾವೆಲ್ ಅಥವಾ ಸಾಲಗಳ ಮರು ಹೊಂದಿಸುವಿಕೆ, ಮದುವೆ, ಆಸ್ತಿ ಖರೀದಿ ಸೇರಿದಂತೆ ಹಲವು ಅಂಶಗಳು ಜನರನ್ನು ವೈಯಕ್ತಿಕ ಸಾಲ ಪಡೆಯಲು ಪ್ರೇರೇಪಿಸುತ್ತದೆ.

ಆದ್ರೆ ಈ ವೈಯಕ್ತಿಕ ಸಾಲ ಪಡೆದ ಬಳಿಕ ಕೆಲವು ಅಂಶಗಳು ನಿಮ್ಮ ಇಎಂಐ ಮೇಲೆ ಪರಿಣಾಮ ಬೀರುತ್ತವೆ. ಹೀಗಾಗಿ ಪ್ರತಿ ತಿಂಗಳ ಬಜೆಟ್‌ಗೆ ಅನುಸಾರವಾಗಿ ನೀವು ಕಂತು ಕಟ್ಟುವ ಒಪ್ಪಂದ ಮಾಡಿಕೊಂಡಿದ್ರೆ, ಎಲ್ಲೂ ಸಮಸ್ಯೆಯಾಗದಂತೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ವೈಯಕ್ತಿಕ ಸಾಲ ಅಥವಾ ಗೋಲ್ಡ್‌ಲೋನ್ ಅಥವಾ ಹೋಮ್ ಲೋನ್‌ಗೆ ನೀವು ಯಾವುದೇ ಅಡಮಾನ ಇಡಬೇಕಾಗಿ ಬರುವುದಿಲ್ಲ. ಹೀಗಾಗಿ ಬ್ಯಾಂಕ್‌ಗಳು ವ್ಯಕ್ತಿಯ ವೇತನ, ಕ್ರೆಡಿಟ್ ಸ್ಕೋರ್ ಸೇರಿದಂತೆ ಕೆಲವು ನಿರ್ದಿಷ್ಟ ಅಂಶಗಳನ್ನಷ್ಟೇ ಪರಿಗಣಿಸಿ ಲೋನ್ ನೀಡುತ್ತವೆ.

ವೈಯಕ್ತಿಕ ಸಾಲದ ಕಂತಿ ಮೇಲೆ ಪರಿಣಾಮ ಬೀರಬಲ್ಲ ಐದು ಅಂಶಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದ್ದು, ಇವು ಗ್ರಾಹಕರ ವೈಯಕ್ತಿಕ ಸಾಲ ಮೇಲೆ ನೇರ ಪರಿಣಾಮವನ್ನು ಬೀರುತ್ತವೆ.

**1) ಸಾಲದ ಮೊತ್ತ :** ನೀವು ಹೆಚ್ಚು ಸಾಲದ ಮೊತ್ತ ಪಡೆದುಕೊಂಡಾಗ ಕಂತಿನ ಮೊತ್ತದ ಹೊರೆ ಕೂಡ ಹೆಚ್ಚಾಗುತ್ತದೆ. ಹೀಗಾಗಿ ಸಾಲದ ಗಾತ್ರವು ಹೆಚ್ಚಾಗಿರದಂತೆ ನೋಡಿಕೊಳ್ಳುವುದು ಉತ್ತಮ. ಅಗತ್ಯವಿಲ್ಲದಷ್ಟು ಹೆಚ್ಚಾಗಿ ಸಾಲ ಪಡೆಯುವುದು ಬಡ್ಡಿ ಭಾರವನ್ನು ಹೆಚ್ಚಿಸುತ್ತದೆ. ಹೀಗಾಗಿ ನಿಜವಾಗಿಯೂ ಬೇಕಾದಷ್ಟು ಮೊತ್ತವನ್ನೇ ಸಾಲವಾಗಿ ಪಡೆಯುವುದು ಉತ್ತಮ.

**2) ಬಡ್ಡಿದರ :** ವೈಯಕ್ತಿಕ ಸಾಲ ಬಡ್ಡಿ ದರವು ನಿಮ್ಮ ಕ್ರೆಡಿಟ್ ಸ್ಕೋರ್, ಆದಾಯ ಸಾಮರ್ಥ್ಯ ಮತ್ತು ಹಣಕಾಸಿನ ನಂಬಿಕೆ ಮೇಲೆ ಅವಲಂಬಿತವಾಗಿರುತ್ತದೆ. ಕೇವಲ ಶೇ. 1 ರಿಂದ 1.5% ಬಡ್ಡಿದರ ವ್ಯತ್ಯಾಸವೂ ಒಟ್ಟು ಸಾಲ ಅವಧಿಯಲ್ಲಿ ದೊಡ್ಡ ಪರಿಣಾಮ ಬೀರುತ್ತದೆ.

**3) ಸಾಲದ ಅವಧಿ :** ದೀರ್ಘಾವಧಿಯ ಸಾಲವು EMI ಕಡಿಮೆ ಮಾಡುತ್ತದೆ, ಆದರೆ ಒಟ್ಟು ಬಡ್ಡಿ ಹೆಚ್ಚಾಗುತ್ತದೆ. ಕಡಿಮೆ ಅವಧಿಯ ಸಾಲ EMI ಹೆಚ್ಚಾದರೂ ಬಡ್ಡಿ ವೆಚ್ಚವನ್ನು ಉಳಿಸುತ್ತದೆ. ನಿಮ್ಮ ಆದಾಯ ಸ್ಥಿತಿ ಆಧಾರವಾಗಿ ಅವಧಿಯನ್ನು ಆಯ್ಕೆ ಮಾಡಬೇಕು.




**4) ಕ್ರೆಡಿಟ್ ಸ್ಕೋರ್ ಮತ್ತು ಆದಾಯ ಸ್ಥಿರತೆ :** 750 ಅಥವಾ ಅದಕ್ಕಿಂತ ಹೆಚ್ಚಿನ ಕ್ರೆಡಿಟ್ ಸ್ಕೋರ್ ಇದ್ದರೆ ಕಡಿಮೆ ಬಡ್ಡಿದರ ಪಡೆಯಲು ಸಹಾಯಕವಾಗುತ್ತದೆ. ನಿಯಮಿತ ಆದಾಯ ಮತ್ತು ಸ್ಥಿರ ಉದ್ಯೋಗ ಇತಿಹಾಸವೂ EMI ನಿರ್ಧಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

**5) ಪ್ರೊಸೆಸಿಂಗ್ ಶುಲ್ಕ ಮತ್ತು ಹೆಚ್ಚುವರಿ ವೆಚ್ಚಗಳು :** ಸಾಲಕ್ಕೆ ಸಂಬಂಧಿಸಿದ ಪ್ರೊಸೆಸಿಂಗ್ ಶುಲ್ಕ, ಜಿಎಸ್‌ಟಿ ಹಾಗೂ ಇತರ ಶುಲ್ಕಗಳು ಒಟ್ಟು ಸಾಲದ ವೆಚ್ಚವನ್ನು ಹೆಚ್ಚಿಸುತ್ತವೆ. ಇವು ಕಂತಿನ ಮೊತ್ತದ ಮೇಲೆ ನೇರ ಪರಿಣಾಮ ಬೀರುವುದಿಲ್ಲವಾದರೂ, ಸಾಲದ ಸಾಮರ್ಥ್ಯವನ್ನು ಪ್ರಭಾವಿಸುತ್ತದೆ.

### ಕಂತು ಯೋಜನೆ ಏಕೆ ಮುಖ್ಯ?

ಸರಿಯಾದ ಕಂತು ತುಂಬುವ ಯೋಜನೆ ಮಾಡಿದರೆ ಸಾಲ ತೀರಿಸುವ ಪ್ರಕ್ರಿಯೆ ಸುಲಭವಾಗುತ್ತದೆ ಮತ್ತು ಮಾಸಿಕ ಬಜೆಟ್ ಮೇಲೆ ಒತ್ತಡ ಬೀರುವುದಿಲ್ಲ. ಜೊತೆಗೆ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ EMI ಕ್ಯಾಲ್ಕ್ಯುಲೇಟರ್‌ಗಳನ್ನು ಬಳಸುವುದರಿಂದ ವಿವಿಧ ಲೋನ್‌ಆಫರ್‌ಗಳನ್ನು ಹೋಲಿಸಿ ಅತ್ಯಂತ ಲಾಭದಾಯಕ ಆಯ್ಕೆಯನ್ನು ಮಾಡಬಹುದು.

## ವಿದೇಶಿ ವಿನಿಮಯ ಸಂಗ್ರಹ ಏರಿಕೆ : ಆರ್‌ಬಿಐ





**ಮುಂಬೈ:** ಡಿಸೆಂಬರ್ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮಾಣ ರೂ.15,144 ಕೋಟಿಯಷ್ಟು ಹೆಚ್ಚಳವಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಪ್ರಸ್ತುತ ಒಟ್ಟು ಮೀಸಲು ಸಂಗ್ರಹ ರೂ.61.77 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಪತ್ತಿನ ಮೌಲ್ಯ ರೂ.8,122 ಕೋಟಿಯಷ್ಟು ಹೆಚ್ಚಳವಾಗಿದ್ದು, ರೂ.50 ಲಕ್ಷ ಕೋಟಿಯಾಗಿದೆ. ಚಿನ್ನದ ಮೀಸಲು ಸಂಗ್ರಹದಲ್ಲಿ ರೂ.6,795 ಕೋಟಿ ಏರಿಕೆಯಾಗಿದ್ದು, ರೂ.9.65 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ರೂ.1.68 ಲಕ್ಷ ಕೋಟಿ ಆಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಭಾರತದ ಪಾಲು ರೂ.42,007 ಕೋಟಿಯಾಗಿದೆ ಎಂದು ತಿಳಿಸಿದೆ.

# ಆರ್‌ಬಿಐ ಒಂಬುಡ್ಸ್‌ಮನ್‌ಗೆ ದೂರು ನೀಡುವುದು ಹೇಗೆ?




**ಸೇವೆಗಳು ಸರಿಯಾಗಿ ಸಿಕ್ಕಿಲ್ಲ ಎಂದಾದರೆ ವ್ಯಕ್ತಿಯು ಮೊದಲಿಗೆ ದೂರನ್ನು ಸಂಬಂಧಪಟ್ಟ ಹಣಕಾಸಿನ ಕಂಪನಿಗೆ ಸಲ್ಲಿಸಬೇಕು. ದೂರನ್ನು ಸ್ವೀಕರಿಸಿದ ಆ ಕಂಪನಿಯು 30 ದಿನಗಳಲ್ಲಿ ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ, ಕಂಪನಿಯು ಆ ದೂರನ್ನು ಪೂರ್ತಿಯಾಗಿ ಅಥವಾ ದೂರಿನ ಒಂದಿಷ್ಟು ಅಂಶಗಳನ್ನು ತಿರಸ್ಕರಿಸಿದರೆ, ಕಂಪನಿಯು ತೆಗೆದುಕೊಂಡ ಪರಿಹಾರ ಕ್ರಮವು ದೂರುದಾರ ವ್ಯಕ್ತಿಗೆ ಸಮಾಧಾನ ನೀಡದೆ ಇದ್ದರೆ ಒಂಬುಡ್ಸ್‌ಮನ್‌ಗೆ ದೂರ ದಾಖಲಿಸಬಹುದು.**

ಹಣಕಾಸು ಕಂಪನಿಗಳು ಒದಗಿಸುವ ಸೇವೆಗಳಲ್ಲಿ ಲೋಪಗಳು ಇದ್ದರೆ, ಅದರ ಬಗ್ಗೆ ದೂರು ದಾಖಲಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಅಡಿಯಲ್ಲಿ ಒಂಬುಡ್ಸ್ ಮನ್ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಈ ವ್ಯವಸ್ಥೆಯಲಿ ಒಂದು ತಿಂಗಳಿಗಿಂತ ಹೆಚ್ಚಿನ ಅವಧಿಯಿಂದ ಬಾಕಿ ಇರುವ ದೂರುಗಳನ್ನು ಇತ್ಯರ್ಥಪಡಿಸಲು ಆರ್‌ಬಿಐ ಅಭಿಯಾನವೊಂದನ್ನು ಜನವರಿಯಿಂದ ಆರಂಭಿಸಲಿದೆ. ಎರಡು ತಿಂಗಳು ಈ ಅಭಿಯಾನ ನಡೆಯಲಿದೆ.

ಈ ಹೊತ್ತಿನಲ್ಲಿ ಒಂಬುಡ್ಸ್‌ಮನ್ ವ್ಯವಸ್ಥೆ ಅಂದರೆ ಏನು, ಅದು ಯಾವ ಬಗೆಯ ದೂರುಗಳನ್ನು ಇತ್ಯರ್ಥಪಡಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಸೂಕ್ತವಾಗಬಹುದು.

ಆರ್‌ಬಿಐ ನೋಂದಾಯಿತ ಹಣಕಾಸಿನ ಕಂಪನಿಗಳ ಸೇವೆಗಳಲ್ಲಿ ಲೋಪ'ಗಳ ವಿಚಾರವಾಗಿ ಒಂಬುಡ್ಸ್‌ಮನ್ ವ್ಯವಸ್ಥೆಗೆ ದೂರು ಸಲ್ಲಿಸಬಹುದು. 'ನೋಂದಾಯಿತ ಕಂಪನಿಯು ಒದಗಿಸಬೇಕಿರುವ ಯಾವುದೇ ಹಣಕಾಸಿನ ಸೇವೆಯಲ್ಲಿನ ಕೊರತೆ ಅಥವಾ ಅಸಮರ್ಪಕ ಸೇವೆಯು ದೂರು ನೀಡುವುದಕ್ಕೆ ಅರ್ಹವಾಗುತ್ತದೆ' ಎಂದು ಆರ್‌ಬಿಐ ವ್ಯಾಖ್ಯಾನಿಸಿದೆ. ಆದರೆ, ಸೇವೆಯು ಸಮರ್ಪಕವಾಗಿ ದೊರೆತಿಲ್ಲ ಎಂದಾದರೆ ಅದರ ಕುರಿತ ದೂರನ್ನು ಮೊದಲ ಹಂತದಲ್ಲೇ ಒಂಬುಡ್ಸ್ ಮನ್‌ಗೆ ಸಲ್ಲಿಸಬಾರದು ಎಂದು ಕೂಡ ಆರ್‌ಬಿಐ ಹೇಳಿದೆ.

ಸೇವೆಗಳು ಸರಿಯಾಗಿ ಸಿಕ್ಕಿಲ್ಲ ಎಂದಾದರೆ ವ್ಯಕ್ತಿಯು ಮೊದಲಿಗೆ ದೂರನ್ನು ಸಂಬಂಧಪಟ್ಟ ಹಣಕಾಸಿನ ಕಂಪನಿಗೆ ಸಲ್ಲಿಸಬೇಕು. ದೂರನ್ನು ಸ್ವೀಕರಿಸಿದ ಆ ಕಂಪನಿಯು 30 ದಿನಗಳಲ್ಲಿ ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ, ಕಂಪನಿಯು ಆ ದೂರನ್ನು ಪೂರ್ತಿಯಾಗಿ ಅಥವಾ ದೂರಿನ ಒಂದಿಷ್ಟು ಅಂಶಗಳನ್ನು ತಿರಸ್ಕರಿಸಿದರೆ, ಕಂಪನಿಯು ತೆಗೆದುಕೊಂಡ ಪರಿಹಾರ ಕ್ರಮವು ದೂರುದಾರ ವ್ಯಕ್ತಿಗೆ ಸಮಾಧಾನ ನೀಡದೆ ಇದ್ದರೆ ಒಂಬುಡ್ಸ್‌ಮನ್‌ಗೆ ದೂರ ದಾಖಲಿಸಬಹುದು.

ದೂರನ್ನು ಮೊದಲು ಸಂಬಂಧಪಟ್ಟ ಹಣಕಾಸಿನ ಕಂಪನಿಗೆ ಸಲ್ಲಿಸದೆ ಅಥವಾ ಹಣಕಾಸು ಕಂಪನಿಗೆ ದೂರು ಸಲ್ಲಿಸಿದ 30 ದಿನಗಳು ಕಳೆಯುವ ಮೊದಲೇ ಒಂಬುಡ್ಸ್ ಮನ್‌ದೂರು ಸಲ್ಲಿಸಿದರೆ ಅದು ಪರಿಗಣನೆಗೆ ಯೋಗ್ಯವಾಗುವುದಿಲ್ಲ.

**ದೂರು ಸಲ್ಲಿಸುವುದು ಹೇಗೆ? :** ಅಂಚೆಯ ಮೂಲಕವೂ ದೂರನ್ನು ಸಲ್ಲಿಸಬಹುದು. ಆದರೆ ಆನ್‌ಲೈನ್ ಮೂಲಕ ದೂರು ಸಲ್ಲಿಸುವಿಕೆ ಸುಲಭ ಎಂಬುದು ಹಲವರ ಅಭಿಪ್ರಾಯ. ದೂರು ಸ್ವೀಕರಿಸಲಿಕ್ಕೆಂದು cms.rbi.org.in ವಿಳಾಸದ ಪೋರ್ಟಲ್ ರೂಪಿಸಲಾಗಿದೆ.

ದೂರು ಸಲ್ಲಿಸುವ ವ್ಯಕ್ತಿಯು ಕೆಲವು ವಿವರಗಳನ್ನು ಅಗತ್ಯವಾಗಿ ಒದಗಿಸಬೇಕು. ಹೆಸರು, ಲಿಂಗ ಮತ್ತು ವಯಸ್ಸು ನಮೂದಿಸಬೇಕು. ದೂರುದಾರನ ಪೂರ್ಣ ಅಂಚೆ ವಿಳಾಸ, ಇ–ಮೇಲ್ ವಿಳಾಸ, ಮೊಬೈಲ್ ದೂರವಾಣಿ ಸಂಖ್ಯೆ ನೀಡಬೇಕು.

ಯಾವ ಕಂಪನಿಯ ವಿರುದ್ಧ ದೂರು ನೀಡಲಾಗುತ್ತಿದೆಯೋ ಆ ಕಂಪನಿಯ ಹೆಸರು ಮತ್ತು ಶಾಖೆಯ ವಿಳಾಸ, ದೂರು ನೀಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದ್ದುದರ ಸಂಪೂರ್ಣ ವಿವರ, ವಹಿವಾಟಿನ ವಿವರಗಳು, ದೂರುದಾರ ವ್ಯಕ್ತಿಯ ಖಾತೆ ಸಂಖ್ಯೆ, ದೂರಿಗೆ ಅಗತ್ಯವಿದ್ದಲ್ಲಿ ಡೆಬಿಟ್‌ಕಾರ್ಡ್ ಅಥವಾ ಕ್ರೆಡಿಟ್‌ಕಾರ್ಡ್ ಸಂಖ್ಯೆಯನ್ನು ಒದಗಿಸಬೇಕು.

ಹಣಕಾಸಿನ ಕಂಪನಿಗೆ ಮೊದಲು ಸಲ್ಲಿಸಿದ್ದ ದೂರಿನ ವಿವರಗಳನ್ನು ನೀಡಬೇಕು, ಅಲ್ಲಿಂದ ದೊರೆತ ಪ್ರತಿಕ್ರಿಯೆಯ ಬಗ್ಗೆಯೂ ಉಲ್ಲೇಖಿಸಬೇಕು. ದೂರು ದಾಖಲಿಸಿದ ನಂತರದಲ್ಲಿ ಅದರ ಸ್ಥಿತಿಗತಿಯ ಬಗ್ಗೆ ಪೋರ್ಟಲ್ ಮೂಲಕವೇ ವಿವರ ಪಡೆದುಕೊಳ್ಳಬಹುದು.



## ನಿಮ್ಮ ಪ್ರಶ್ನೆ ನಮ್ಮ ಉತ್ತರ



▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನಲ್ಲಿ ಸಹಕಾರ ಸಂಘದ ಠೇವಣಿ ಇದೆ. ನಾವು ಈ ಠೇವಣಿಯ ಮೇಲೆ ಮೂಲದಲ್ಲಿ ಕರ ಕಡಿತ (ಟಿ.ಡಿ.ಎಸ್) ಮಾಡಬೇಕೇ? ಸಂಬಂಧಿತ ಸುತ್ತೋಲೆಯೊಂದಿಗೆ ಈ ವಿಷಯದಲ್ಲಿ ಮಾರ್ಗದರ್ಶನ ಮಾಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ದಾವಣಗೆರೆ.**

**ಉತ್ತರ :** ಆದಾಯ ತೆರಿಗೆಯ ಕಾಯ್ದೆಯ ಕಲಂ 194ಎ ಅನ್ನು ಹಣಕಾಸು ವರ್ಷ 2020ರಲ್ಲಿ ತಿದ್ದುಪಡಿ ಮಾಡಲಾಗಿದೆ. ತಿದ್ದುಪಡಿಯ ನಂತರ ಸಹಕಾರ ಸಂಘದ ಆದಾಯ (ರಶೀದಿ) 50 ಕೋಟಿ ರೂಪಾಯಿಗಿಂತ ಹೆಚ್ಚಿಗೆ ಇದ್ದರೆ, ಅದು ಬ್ಯಾಂಕಿಂಗ್ ವ್ಯವಹಾರದಲ್ಲಿ ತೊಡಗಿದೆಯೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಕಲಂ 194ಎ ಅಡಿಯಲ್ಲಿ ಮೂಲದಲ್ಲಿ ಕರಕಡಿತ ಮಾಡಬೇಕಾಗುತ್ತದೆ. ಆದ್ದರಿಂದ ಸಹಕಾರ ಸಂಘದ ಠೇವಣಿಗಳ ಮೇಲೆ ಪಾವತಿಸುವ ಬಡ್ಡಿಯ ಮೊತ್ತ ಒಂದು ಹಣಕಾಸು ವರ್ಷದಲ್ಲಿ 50,000 ರೂಪಾಯಿ ಮೀರಿದರೆ ಮೂಲದಲ್ಲಿ ತೆರಿಗೆಯನ್ನು ಕಡಿತ ಮಾಡಬೇಕಾಗುತ್ತದೆ.

**02. ನಮ್ಮ ಬ್ಯಾಂಕಿನ ಗುಂಪು ಸಾಲದ (Group exposure) ಮಿತಿ ರೂ.4 ಕೋಟಿ ಇದೆ. ನಮ್ಮ ನಾಲ್ಕು ಸದಸ್ಯರು ಹೊಸದೊಂದು ಖಾಸಗಿ ಸೀಮಿತ ಕಂಪನಿಯನ್ನು ಹುಟ್ಟು ಹಾಕಿದ್ದು ಅವರು ಪೇಯಿಂಗ್ ಗೆಸ್ಟ್‌ಗಳಿಗೋಸ್ಕರ ಒಂದು ಕಟ್ಟಡವನ್ನು ಖರೀದಿಸಲು ಬಯಸಿದ್ದು ನಮ್ಮ ಬ್ಯಾಂಕಿನಿಂದ ರೂ.4 ಕೋಟಿ ಸಾಲಕ್ಕೆ ಅರ್ಜಿ ಹಾಕಿದ್ದಾರೆ. ಹೊಸದಾಗಿ ಖರೀದಿಸುವ ಕಟ್ಟಡವನ್ನು ನಮ್ಮ ಬ್ಯಾಂಕಿಗೆ ಒತ್ತೆ ಇಡುತ್ತಾರೆ. ನಾವು ರೂ.4 ಕೋಟಿ ಸಾಲವನ್ನು ಕಂಪನಿಯ ಹೆಸರಿಗೆ ನೀಡಬಹುದೇ? ಅಥವಾ ಪ್ರತಿಯೊಬ್ಬ ನಿರ್ದೇಶಕರ ಹೆಸರಿನಲ್ಲಿ ರೂ.1 ಕೋಟಿ ಸಾಲ ನೀಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಖಾಸಗಿ ಸೀಮಿತ ಕಂಪನಿಯು ಕಾನೂನು ಬದ್ಧಘಟಕವಾಗಿದ್ದು ಸಾಲ ಮಾನ್ಯತೆ ಮಿತಿಗೆ ಒಬ್ಬ ವ್ಯಕ್ತಿಯಾಗಿ ಪರಿಗಣಿಸಲಾಗುತ್ತದೆ. ಆದ್ದರಿಂದ ಒಂದು ಬ್ಯಾಂಕು ಗುಂಪು ಮಾನ್ಯತೆ ಮಿತಿಯ ಅಡಿಯಲ್ಲಿ ಸಾಲವನ್ನು ಮಂಜೂರು ಮಾಡಲು ಅಥವಾ ಕಂಪನಿಯ ನಾಲ್ಕು ನಿರ್ದೇಶಕರಿಗೆ ತಲಾ 1.00ಕೋಟಿ ರೂಪಾಯಿ ಸಾಲವನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಮಂಜೂರು ಮಾಡಬಹುದಾದ ಸಾಲದ ಗರಿಷ್ಠ ಸಾಲವು ಬ್ಯಾಂಕಿನ ಶ್ರೇಣಿ 1 ಬಂಡವಾಳದ ಶೇ.15ರಷ್ಟು ಆಗಿರುತ್ತದೆ.

## ನೇರ ತೆರಿಗೆ ಸಂಗ್ರಹ ಹೆಚ್ಚಳ : ರೂ.17.04 ಲಕ್ಷ ಕೋಟಿ ವರಮಾನ ಸಂಗ್ರಹ




**ನವದೆಹಲಿ:** ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಡಿಸೆಂಬರ್ 17ರವರೆಗೆ ನಿವ್ವಳ ನೇರ ತೆರಿಗೆ ಸಂಗ್ರಹವು ರೂ.17.04 ಲಕ್ಷ ಕೋಟಿಯಷ್ಟಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಅಂಕಿ ಅಂಶಗಳು ತಿಳಿಸಿವೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ನೇರ ತೆರಿಗೆ ಸಂಗ್ರಹ ಪ್ರಮಾಣದಲ್ಲಿ ಶೇ.8ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ. ಮರುಪಾವತಿಯು ಮಂದಗೊಂಡಿರುವುದು ಮತ್ತು ಕಾರ್ಪೊರೇಟ್‌ಗಳಿಂದ ಮುಂಗಡ ತೆರಿಗೆ ಸಂಗ್ರಹದ ಪ್ರಮಾಣದಲ್ಲಿ ಏರಿಕೆಯಾಗಿರುವುದು ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ.10.54ರಷ್ಟು ಹೆಚ್ಚಳವಾಗಿ, ರೂ.8.17 ಲಕ್ಷ ಕೋಟಿಯಾಗಿದೆ. ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್‌ಯೇತರ ತೆರಿಗೆ ಸಂಗ್ರಹವು ರೂ.8.47 ಲಕ್ಷ ಕೋಟಿಯಾಗಿದ್ದು, ಶೇ.6.37ರಷ್ಟು ಏರಿಕೆ ಕಂಡಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವು ರೂ.40,195 ಕೋಟಿಯಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮರುಪಾವತಿಯು (ರೀಫಂಡ್) ಶೇ.14ರಷ್ಟು ಇಳಿದಿದ್ದು, ರೂ.2.97 ಲಕ್ಷ ಕೋಟಿಯಾಗಿದೆ. ಮರುಪಾವತಿಯನ್ನು ಸರಿಹೊಂದಿಸುವ ಮೊದಲು ಒಟ್ಟು ನೇರ ತೆರಿಗೆ ಸಂಗ್ರಹವು ಶೇ. 4.16ರಷ್ಟು ಏರಿಕೆಯಾಗಿ, ರೂ.20.01 ಲಕ್ಷ ಕೋಟಿ ದಾಟಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ರೂ.25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ.12.7ರಷ್ಟು ಹೆಚ್ಚಳ. ಷೇರು ವಹಿವಾಟು ತೆರಿಗೆ ಮೂಲಕ ರೂ.78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.

'ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿರುವುದು ಕಾರ್ಪೊರೇಟ್ ಕಂಪನಿಗಳ ಸದೃಢ ಗಳಿಕೆಯನ್ನು ಸೂಚಿಸುತ್ತಿದೆ' ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ರೋಹಿಂಟನ್ ಸಿಧ್ವಾ ಹೇಳಿದ್ದಾರೆ. ಮರುಪಾವತಿ ಸಂಬಂಧಿಸಿದ ಪ್ರಕರಣಗಳ ಹೆಚ್ಚಿನ ಪರಿಶೀಲನೆಯಿಂದಾಗಿ ಮರುಪಾವತಿ ವಿತರಣೆಯಲ್ಲಿ ಇಳಿಕೆ ಕಂಡು ಬಂದಿದೆ ಎಂದು ಹೇಳಿದ್ದಾರೆ.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಚೊಚ್ಚಲ ಅಂಧರ ಟಿ–20 ಮಹಿಳಾ ವಿಶ್ವಕಪ್ ಗೆದ್ದ ಭಾರತದ ಅಂಧ ಮಹಿಳೆಯರ ಕ್ರಿಕೆಟ್ ತಂಡದ ಆಟಗಾರ್ತಿ ರಿಪ್ಪನ್‌ಪೇಟೆಯ ನಿವಾಸಿ ವಿ. ಕಾವ್ಯ ಅವರು, ಈ ಜಗತ್ತಿನಲ್ಲಿ ಯಾವುದೂ ಅಸಾಧ್ಯವಲ್ಲ ಯಾವುದಕ್ಕೂ ಇಚ್ಛಾಶಕ್ತಿಯೇ ದೊಡ್ಡ ಸಂಪತ್ತು ಎಂದು ಹೇಳುತ್ತಾರೆ. ಇತ್ತೀಚೆಗೆ ಕೊಲಂಬೊದಲ್ಲಿ ನೇಪಾಳವನ್ನು ಏಳು ವಿಕೆಟ್‌ಗಳಿಂದ ಸೋಲಿಸುವ ಮೂಲಕ ಭಾರತ ತಂಡ ಚೊಚ್ಚಲ ಟಿ–20 ಅಂತರರಾಷ್ಟ್ರೀಯ ಏಕದಿನ ವಿಶ್ವಕಪ್ ಅನ್ನು ಗೆದ್ದುಕೊಂಡ ತಂಡದ ನಾಯಕಿ ಟಿ.ಸಿ. ದೀಪಿಕಾ ಕೂಡಾ ಕರ್ನಾಟಕದವರೇ ಆಗಿದ್ದಾರೆ.
- ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಬೋರಗಾಂವ್‌ನಲ್ಲಿ ಆಯೋಜಿಸಿದ್ದ ದೇಶದ ಅತೀ ದೊಡ್ಡ ಎತ್ತಿನ ಬಂಡಿಗಳ ಓಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಎತ್ತು, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶಿರೂರಿನ ರೈತ ಬಾಳು ಹಜಾರೆ ಅವರಿಗೆ ಸೇರಿದ್ದಾಗಿದೆ. ಎಂಟು ವರ್ಷ ವಯಸ್ಸಿನ ಸದೃಢ ಮೈಕಟ್ಟಿನ ಹೆಲಿಕಾಪ್ಟರ್ ಬೈಜ್ಯಾ ಎಂದು ಜನಪ್ರಿಯವಾಗಿರುವ ಈ ಎತ್ತು ಈವರೆಗೆ ನೂರಕ್ಕೂ ಅಧಿಕ ಸ್ಪರ್ಧೆಗಳಲ್ಲಿ ಬುಲೆಟ್ ಬೈಕುಗಳು, ಬೈಕುಗಳು, ಟ್ರ್ಯಾಕ್ಟರ್‌ಗಳು, ಬೆಳ್ಳಿಯ ಗದೆಗಳು, ನಗದು ಬಹುಮಾನ ಹೀಗೆ ಈವರೆಗೆ ಗಳಿಸಿದ ಒಟ್ಟು ಬಹುಮಾನದ ಮೊತ್ತ ಸುಮಾರು 2 ಕೋಟಿ ರೂ. ಅಧಿಕವಾಗಿದೆ.
- ದಕ್ಷಿಣ ಕನ್ನಡ ಜಿಲ್ಲೆಯ ಅರೇಬಿಯನ್ ಸಮುದ್ರ ಮತ್ತು ಫಲ್ಗುಣಿ ನದಿಯ ನಡುವೆ ಇರುವ ಮಂಗಳೂರಿನ ಸಮೀಪದ ಪ್ರಕೃತಿದತ್ತ ಸೊಬಗಿನ ಪ್ರದೇಶ ಬೆಂಗರೆ, ಇಲ್ಲಿನ ಮೊಗವೀರ ಮತ್ತು ಖಾರ್ವಿ ಸಮುದಾಯದ ಮಹಿಳೆಯರ ಒತ್ತಾಯದ ಮೇರೆಗೆ ಇಲ್ಲಿನ ಪಂಚಾಯಿತಿ ಕಳೆದ ಮೂವತ್ತು ವರ್ಷಗಳಿಂದ ಮದ್ಯ ಮಾರಾಟ ನಿಷೇಧಿಸಿದೆ.
- ಮಂಗಳೂರು ಸಮೀಪದ ಮತ್ತೊಂದು ಗ್ರಾಮ ಪಡುಪೆರಾರವನ್ನು ತಂಬಾಕು ಉತ್ಪನ್ನಗಳ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿರುವುದರಿಂದ ತಂಬಾಕು ಉತ್ಪನ್ನಗಳ ಮಾರಾಟ ಇಲ್ಲದ ಜಿಲ್ಲೆಯ ಮೊದಲ ಗ್ರಾಮವೆಂದು ಮನ್ನಣೆ ಪಡೆದಿದೆ.
- ಬೆಂಗಳೂರಿನಲ್ಲಿ ಸೈಬರ್ ಅಪರಾಧ ಪ್ರಕರಣಗಳು ದಿನಕ್ಕೊಂದು ಸ್ವರೂಪ ಪಡೆದುಕೊಳ್ಳುತ್ತಿದ್ದು, ಸೈಬರ್ ವಂಚಕರು ಭಯೋತ್ಪಾದನೆ ನಡೆಸುವ ಪ್ರಕರಣಗಳಲ್ಲಿ ತಾವು ಭಾಗಿ ಆಗಿದ್ದೀರಿ ಎಂದು ಸಾರ್ವಜನಿಕರನ್ನು ಬೆದರಿಸುವ ಹೊಸ ತಂತ್ರವನ್ನು ಬಳಸುತ್ತಿದ್ದಾರೆ. ಆ ಮೂಲಕ ನಾಗರಿಕರಿಂದ ಲಕ್ಷಾಂತರ ರೂಪಾಯಿ ದೋಚುತ್ತಿದ್ದಾರೆ.

## ಓದುಗರ ಅನಿಸಿಕೆ...



**ಸ್ವಾಗತಾರ್ಹವಾಗಿದೆ :** ರೂ. 5,10,20 ಮೊತ್ತದವರೆಗಿನ ನಾಣ್ಯಗಳು ಚಲಾವಣೆಯಲ್ಲಿದ್ದರೂ ಜನ ಅವುಗಳನ್ನು ಸ್ವೀಕರಿಸಲು ಹಿಂತೆಗೆಯುತ್ತಾರೆ, ಬದಲಿಗೆ ನೋಟುಗಳನ್ನು ಕೇಳುತ್ತಾರೆ. ಈ ಹಿನ್ನೆಲೆಯಲ್ಲಿ ಒಂದೇ ಮೌಲ್ಯದ ವಿಭಿನ್ನ ನಾಣ್ಯ ಬಗೆಯ ವಿನ್ಯಾಸದ ನಾಣ್ಯಗಳು ಚಲಾವಣೆಯಲಿವೆ ಅವೆಲ್ಲವೂ ಸ್ವೀಕಾರಾರ್ಹ ಎಂದು ಆರ್‌ಬಿಐ ನಾಣ್ಯಗಳ ವಿಷಯದಲ್ಲಿ ಜಾಗೃತಿ ಮೂಡಿಸಲು ರಿಸರ್ವ್ ಬ್ಯಾಂಕ್ ಮುಂದಾಗಿರುವುದು ಸ್ವಾಗತಾರ್ಹವಾಗಿದೆ.

**▸▸ ಶ್ರೀಕಂಠ ಶಾಸ್ತ್ರೀ ಬಿ., ಮೈಸೂರು**

**ಶ್ಲಾಘನಿಯವಾಗಿದೆ :** ಮುಂದಿನ ವರ್ಷ ಏಪ್ರಿಲ್ 1ರಿಂದ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರುವವರು ಮಾಡುವ ಯಾವುದೇ ಡಿಜಿಟಲ್ ವಹಿವಾಟಿನ ಮಿತಿ ಇರುವುದಿಲ್ಲ. ಜೊತೆಗೆ, ವರ್ಷಕ್ಕೆ 25 ಚೆಕ್ ಹಾಳೆಗಳ ಉಚಿತ ಪಾಸ್ ಬುಕ್ ಮತ್ತು ಸ್ಟೇಟೆಂಮೆಟ್‌ಗಳನ್ನು ಪಡೆಯಬಹುದಾಗಿದೆ ಎನ್ನುವ ನಿಯಮಗಳು ಜಾರಿಗೆ ಬರಲಿದೆ ಎಂದು ಆರ್.ಬಿ.ಐ. ತಿಳಿಸಿರುವುದು ಶ್ಲಾಘನಿಯವಾಗಿದೆ.

**▸▸ ಸಂತೋಷ್‌ಕುಮಾರ್ ಕೆ., ಬಳ್ಳಾರಿ**

**ಇವರಿಗೆ,**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ
ಮಹಾಮಂಡಳ ನಿ., ಬೆಂಗಳೂರು.

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.